**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ26.03.2026**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎನ್ ಕೆ ವಕೀಲರಿಂದ**

ನಾನು ಈ ದಾವೆಯನ್ನು 2018 ರಲ್ಲಿ ಸಲ್ಲಿಸಿರುತ್ತೇನೆ. ಈ ದಾವೆ ಸಲ್ಲಿಸುವಾಗ 22*16 ಅಡಿ ವಿಸ್ತೀರ್ಣಕ್ಕೆ ದಾವೆ ಹೂಡಿರುತ್ತೇನೆ. ದಾವೆಯನ್ನು ಎರಡು ಬಾರಿ ತಿದ್ದುಪಡಿ ಮಾಡಿಕೊಂಡಿರುತ್ತೇನೆ. ಪ್ರತಿವಾದಿ ವಿಚಾರಣೆ ಕಾಲಕ್ಕೆ ಇತ್ತೀಚೆಗೆ ಮತ್ತೊಮ್ಮೆ ತಿದ್ದುಪಡಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ದಾವ ಸಲ್ಲಿಸಿದ 7-8 ವರ್ಷದ ನಂತರ ತಿದ್ದುಪಡಿ ಅರ್ಜಿ ಹಾಕಿರುತ್ತೇನೆಂದರೆ ಸರಿ. ತಿದ್ದುಪಡಿ ಅರ್ಜಿ ಹಾಕುವ ಪೂರ್ವದಲ್ಲಿ ದಾವ ಆಸ್ತಿಯನ್ನು ಅಳತೆ ಮಾಡಿಸಿರುವುದಿಲ್ಲ. ನಾನು ತಿದ್ದುಪಡಿಯನ್ನು ಕಾಲಮಿತಿ ನಂತರ ಮಾಡಿದ್ದರಿಂದ ನಾನು ಯಾವುದೇ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ತಿದ್ದುಪಡಿಯನ್ನು ಒತ್ತುವರಿ ಜಾಗದ ಸಲುವಾಗಿ ಮಾಡಿರುತ್ತೇನೆ. ನ್ಯಾಯಾಲಯಕ್ಕೆ ದಾವೆ ಹೂಡುವ ಮೊದಲು ಒತ್ತುವರಿ ಆಗಿರುತ್ತದೆ. ವಾದ ಪತ್ರದಲ್ಲಿ ಯಾವಾಗ ಒತ್ತುವರಿಯಾಗಿರುತ್ತದೆ ಎಂದು ಬರೆಸಿರುವುದಿಲ್ಲ. ಯಾವುದೇ ಒತ್ತುವರಿಯಾಗದಿದ್ದರೂ ಅಕ್ರಮವಾಗಿ ಲಾಭ ಗಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**